# ಅಖಿಲ ಭಾರತ ದಲಿತ ಮಹಾಸಭಾ

ಕರ್ನಾಟಕ ರಾಜ್ಯ ಸಮಿತಿ

# AKHILA BHARATA DALITA MAHASABHA

KARNATAKA STATE COMMITTEE

No. 12, Thimmaiah Road, Basaveshwara Layout, R.M.V. 2nd Stage, Bangalore - 560 094

**Dr. BHEEMARAJU,** State President

Mobile : 98459 85962


Ref. No. :

Date : 26/8/19

ಶ್ರೀಮಾನ್ ಶ್ರೀ ಡಾ. ಮಂಜುನಾಥ್ ಸರ್ ರವರೇ
ಸನ್ಮಾನ್ಯ ನಿರ್ದೇಶಕರು
ಜಯದೇವ ಹೃದ್ರೋಗ ಸಂಸ್ಥೆ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು

ಮಾನ್ಯರೇ,

ನಿಮ್ಮ ಹೃದಯ ಶ್ರೀಮಂತಿಕೆಯ ಬಗ್ಗೆ ಎಷ್ಟು ವರ್ಣಿಸಿದರೂ ಸಾಲದು. ರಾಜ್ಯದಲ್ಲಿ/ದೇಶದಲ್ಲಿ ನಿಮ್ಮಂತಹ ಹೃದಯ ಶ್ರೀಮಂತಿಕೆ ಇರುವವರು ನೂರಕ್ಕೆ ಒಬ್ಬರಿದ್ದರೂ ರಾಜ್ಯ ಮತ್ತು ದೇಶ ಮುಂದುವರಿಯುವದರಲ್ಲಿ ಸಂಶಯವೇ ಇಲ್ಲ. ಇವತ್ತಿನ ಸಮಾಜದಲ್ಲಿ ಹಣ ಸಂಪಾದನೆಗಾಗಿ ನೂರಾರು ಹೆಸರುಗಳಲ್ಲಿ ಆಸ್ಪತ್ರೆಗಳನ್ನು ಸ್ಥಾಪಿಸಿಕೊಂಡಿರುವುದು ಸರಿಯಷ್ಟೆ, ಆದರೆ ಬಡವರು ಮತ್ತು ನಿರ್ಗತಿಕರು ಎಂಬುದಾಗಿ ಕಾಡಿಬೇಡಿದರೂ ಕೂಡ ಬಡವರ ಬಗ್ಗೆ ಕರುಣೆ ತೋರದೆ ಹಣ ಮಾಡುವ ಒಂದೇ ಗುರಿ ಹೊಂದಿರುವಂತಹ ಇಂದಿನ ಸಮಾಜವಾಗಿರುತ್ತದೆ. ಆಸ್ಪತ್ರೆಗಳ ದುಬಾರಿ ಹಣ ಕಟ್ಟಲಾಗದೇ ಸಾವಿರಾರು ಜನ ಹೆಣವಾಗಿ ಹೋಗುತ್ತಿದ್ದಾರೆ. ಮನುಷ್ಯತ್ವವೇ ಇಲ್ಲದ ಸಮಾಜದಲ್ಲಿ ಆರೋಗ್ಯದ ನೆಪದಲ್ಲಿ ಕೋಟಿ ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುವವರೆ ಜಾಸ್ತಿ ಇದ್ದಾರೆ.

ಇಂತಹ ಸಮಾಜದಲ್ಲಿ ಶಿಖರದ ಎತ್ತರದಲ್ಲಿರುವ ತಾವು ಶಿಖರದ ಬುಡದಲ್ಲಿರುವ ಒಂದು ಸಣ್ಣ ಕಲ್ಲಿನ ಬಗ್ಗೆ ಚಿಂತಿಸುವಂತಹ ಹೃದಯಕ್ಕೆ ಜನ್ಮ ನೀಡಿದ ನಿಮ್ಮ ತಂದೆ-ತಾಯಿಯವರಿಗೆ ಕೋಟಿ ಕೋಟಿ ನಮಸ್ಕಾರಗಳು, ಅಂತಹವರ ಮಗನಾಗಿ ಹುಟ್ಟಿರುವ ನೀವು ಬೆಳಗಾದರೆ ಬಡವರ ಬಗ್ಗೆ ಮೆಲುಕು ಹಾಕುತ್ತಾ ತಮ್ಮ ಅಮೂಲ್ಯವಾದ ಸೇವೆಯನ್ನು ಬಡವರ ಪರವಾಗಿ ಮೀಸಲಿಟ್ಟಿರುವುದು ಶ್ಲಾಘನೀಯ. ನಿಮ್ಮ ಸೇವೆಗೆ ನನ್ನ ಕೋಟಿ ಕೋಟಿ ನಮಸ್ಕಾರಗಳು ಸಾರ್. ದೇವರು ನಿಮ್ಮ ಹೃದಯವಂತಿಕೆಗೆ ತಕ್ಕ ಕೃಪೆ, ಆಶೀರ್ವಾದ, ಆರೋಗ್ಯ ನೀಡಿ ನಿಮ್ಮ ಕುಟುಂಬ ಸಂತೋಷವಾಗಿರಲೆಂದು ನಾನು, ನನ್ನ ಕುಟುಂಬ ದೇವರಲ್ಲಿ ಪ್ರಾರ್ಥಿಸುತ್ತೇವೆ. ತಾವು ಇನ್ನು ಅತಿ ಹೆಚ್ಚಿನ ಶಿಖರವೇರಲೆಂದು ಕೋರುತ್ತೇವೆ.

ಗೌರವಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

(ಡಾ. ಭೀಮರಾಜು)
ರಾಜ್ಯಾಧ್ಯಕ್ಷರು ಹಾಗೂ ಸಮಾಜ ಸೇವಕರು